**<u>ಸಾಕ್ಷಿಗೆ ದಿನಾಂಕಃ 10.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಮುಖ್ಯ ವಿಚಾರಣೆ: 1 ನೇ ಎದುರುದಾರರ ಪರ ಶ್ರೀ.ಕೆ.ಎಂ. ವಕೀಲರಿಂದಃ</u>**

1) ನಾನು ಈ ಪ್ರಕರಣದಲ್ಲಿ **1** ನೇ ಎದುರುದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿ ಮಾಡಿರುತ್ತೇನೆ. ನನ್ನ ಹೇಳಿಕೆಗೆ ಸರಿಯಾಗಿ ನಮ್ಮ ವಕೀಲರು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಿದ್ಧಪಡಿಸಿದ್ದಾರೆ.

2) ಈಗ ಸಾಕ್ಷಿದಾರರು **KA-05-ND-7538** ವಾಹನದ **Certificate of registration** ಮತ್ತು **Insurance policy** ಮತ್ತು ಈ ಸಾಕ್ಷಿದಾರನ ಚಾಲನಾ ಪರವಾನಗಿ ಮತ್ತು ಆಧಾರ್ ಕಾರ್ಡ್ ದಾಖಲೆಗಳನ್ನು ಮತ್ತು ಇದೇ ದಾಖಲೆಗಳ ಫೋಟೋ ಪ್ರತಿಗಳನ್ನು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಗಳನ್ನು ಮತ್ತು ಫೋಟೋ ಪ್ರತಿಗಳನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಗಳನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಗಳನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಗಳನ್ನು ನಿ.ಆರ್.**1** ರಿಂದ ನಿ.ಆರ್.**4** ಎಂದು

ಗುರುತಿಸಿದೆ ಮತ್ತು ಮೂಲ ದಾಖಲೆಗಳನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

3) ಆದ ಕಾರಣದಿಂದ ನನ್ನ ವಿರುದ್ಧ ಈ ಪ್ರಕರಣವನ್ನು ವಜಾ ಮಾಡಬೇಕು ಎಂದು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ.ಜಿ.ಸಿ.ಆರ್ ವಕೀಲರಿಂದಃ**

**1)** ಅಪಘಾತವು ಕನಕಪುರದಿಂದ ಬೆಂಗಳೂರಿಗೆ ಹೋಗುವ ರಸ್ತೆಯಲ್ಲಿ ಆಗಿದೆ ಎಂದರೆ ಸರಿ. ಅಪಘಾತವು ಆದ ಸ್ಥಳದಲ್ಲಿ ರಸ್ತೆಯು ನೇರವಾಗಿ ಇದೆ ಎಂದರೆ ಸರಿ. ಅಪಘಾತವು ಆದಂತಹ ಸ್ಥಳದಲ್ಲಿ ರಸ್ತೆಯ ಮಧ್ಯದಲ್ಲಿ ರಸ್ತೆ ವಿಭಜಕವು ಇದೆ ಮತ್ತು ಆ ರಸ್ತೆ ವಿಭಜಕದ ಎರಡೂ ಬದಿಗಳಲ್ಲಿ ತಲಾ **26** ಅಡಿ ಅಗಲದ ರಸ್ತೆ ಇದೆ ಎಂದರೆ ಸರಿ.

**2)** ನಾನು ನನ್ನ ಕಾರಿನಲ್ಲಿ ಹೋಗುತ್ತಿದ್ದಾಗ ಕೆಎ**-42-**ಇಜಿ**-7818** ಸಂಖ್ಯೆಯ ದ್ವಿಚಕ್ರ ವಾಹನವು ನನ್ನ ಕಾರಿನ ಮುಂಭಾಗದಲ್ಲಿ ಹೋಗುತ್ತಿತ್ತು ಮತ್ತು ನಾನು ಸದರಿ ದ್ವಿಚಕ್ರ ವಾಹನವನ್ನು ಪ್ರಥಮ ಬಾರಿಗೆ ನೋಡಿದಾಗ ಆ ದ್ವಿಚಕ್ರ ವಾಹನವು ನನ್ನ ಕಾರಿನಿಂದ ಸುಮಾರು **30** ರಿಂದ **40** ಅಡಿ ದೂರದಲ್ಲಿ ಇತ್ತು.

**3)** ಕೆಎ**-42-**ಇಜಿ**-7818** ಸಂಖ್ಯೆಯ ದ್ವಿಚಕ್ರ ವಾಹನವು ರಸ್ತೆಯ ಮಧ್ಯಭಾಗದಲ್ಲಿ ಇತ್ತು. ಆ ಸಮಯದಲ್ಲಿ ನನ್ನ ಕಾರಿನ ಮುಂಭಾಗದಲ್ಲಿ ಸದರಿ ಕೆಎ**-42-**ಇಜಿ**-7818** ಸಂಖ್ಯೆಯ ದ್ವಿಚಕ್ರ ವಾಹನವನ್ನು ಬಿಟ್ಟರೆ ಬೇರೆ ಯಾವುದೇ ವಾಹನಗಳು ಇರಲಿಲ್ಲ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು "ಪಡುವನಗೆರೆ ಕ್ರಾಸಿನ ಬಳಿ ಮತ್ತೊಂದು ಕಾರು ಬರುತ್ತಿತ್ತು" ಎಂದು ನುಡಿದಿದ್ದಾರೆ.

**4)** ಪಡುವನಗೆರೆ ಕ್ರಾಸಿನಿಂದ ಸುಮಾರು **250** ರಿಂದ **300** ಅಡಿ ದೂರದಲ್ಲಿ ಅಪಘಾತವು ಆಗಿದೆ ಎಂದರೆ ಸರಿ.

**5)** ಮೇಲೆ ಹೇಳಿದ ಕೆಎ**-42-**ಇಜಿ**-7818** ಸಂಖ್ಯೆಯ ದ್ವಿಚಕ್ರ ವಾಹನವು ರಸ್ತೆಯ ಅಂಚಿನಿಂದ ಕೇವಲ **2** ಅಡಿ ದೂರದಲ್ಲಿ ರಸ್ತೆಯ ಮೇಲೆ ಹೋಗುತ್ತಿತ್ತು ಮತ್ತು ನಾನು ನನ್ನ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಆ ದ್ವಿಚಕ್ರ ವಾಹನಕ್ಕೆ ಹಿಂದಿನಿಂದ ಕಾರನ್ನು ಡಿಕ್ಕಿ ಹೊಡೆಸಿದ್ದೇನೆ ಎಂದರೆ ನಾನು ಆ ದ್ವಿಚಕ್ರ ವಾಹನವನ್ನು ಗಮನಿಸಲಿಲ್ಲ.

**6)** ನನ್ನ ಕಾರಿನ ಮುಂಭಾಗದಲ್ಲಿ ನಾಮಫಲಕ **(Number plate)** ಇರುವಂತಹ ಜಾಗವು ಆ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ ಎಂದರೆ

ಸುಳ್ಳು. ನನ್ನ ಕಾರಿಗೆ ಏನು ಏನು ಜಖಂಗಳು ಆಗಿದ್ದವು ಎಂಬುದಾಗಿ ಐಎಂವಿ ವರದಿಯಲ್ಲಿ ನಮೂದು ಇದೆ ಎಂದರೆ ಸರಿ.

**7)** ಪಡುವನಗೆರೆ ಕಡೆಗೆ ಮತ್ತೊಂದು ಕಾರು ಹೋಗುತ್ತಿತ್ತು ಮತ್ತು ಆ ಕಾರನ್ನು ನೋಡಿಕೊಂಡು ನನ್ನ ಕಾರನ್ನು ನಾನು ಚಾಲನೆ ಮಾಡಿದೆನು ಮತ್ತು ಆ ಸಮಯದಲ್ಲಿ ನಾನು ನನ್ನ ಕಾರಿನ ಮೇಲೆ ನಿಯಂತ್ರಣವನ್ನು ಕಳೆದುಕೊಂಡು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಮೇಲೆ ಹೇಳಿದ ದ್ವಿಚಕ್ರ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಹೊಡೆಸಿದ್ದೇನೆ ಎಂದರೆ ಸುಳ್ಳು.

**8)** ಒಂದು ವೇಳೆ ನಾನು ನನ್ನ ಕಾರನ್ನು ನಿಧಾನವಾಗಿ ಚಾಲನೆ ಮಾಡುತ್ತಿದ್ದ ಪಕ್ಷದಲ್ಲಿ ನಾನು ಅಪಘಾತವನ್ನು ತಪ್ಪಿಸಬಹುದಾಗಿತ್ತು ಎಂದರೆ ನಾನು ನನ್ನ ವಾಹನವನ್ನು ಜಾಗರೂಕತೆಯಿಂದಲೇ ಚಾಲನೆ ಮಾಡುತ್ತಿದ್ದೆನು.

**9)** ಅಪಘಾತವು ಆದ ನಂತರ ನನ್ನ ಕಾರನ್ನು ಪೋಲಿಸರು ಸ್ಥಳದಿಂದ ಜಪ್ತಿ ಮಾಡಿದ್ದಾರೆ ಎಂದರೆ ಸರಿ. ಅಪಘಾತಕ್ಕೆ ಸಂಬಂಧಪಟ್ಟ ಹಾಗೆ ನಾನು ಪೋಲಿಸರಿಗೆ ಯಾವುದೇ ಕೌಂಟರ್ ಕಂಪ್ಲೇಂಟ್ ನೀಡಿರುವುದಿಲ್ಲ ಎಂದರೆ ಅಪಘಾತವು ಆದ ನಂತರ ನನಗೆ ಶಾಕ್ ಆಯಿತು ಮತ್ತು ಆ ಕಾರಣದಿಂದ ನಾನು ಆ ರೀತಿ ಕೌಂಟರ್ ಕಂಪ್ಲೇಂಟ್ ಕೊಟ್ಟಿರುವುದಿಲ್ಲ.

**10)** ಅಪಘಾತವು ನನ್ನ ತಪ್ಪಿನಿಂದಲೇ ಆಗಿದೆ ಎಂಬುದಾಗಿ ಪೋಲಿಸರು ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಮತ್ತು ಆ ಅಂತಿಮ ವರದಿಯನ್ನು ನಾನು ಇದುವರೆಗೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಈ ಪ್ರಶ್ನೆಗೆ ಸಾಕ್ಷಿದಾರರು ಯಾವುದೇ ಉತ್ತರವನ್ನು ಕೊಡದೇ ಮೌನವಾಗಿ ನಿಂತಿದ್ದಾರೆ. ಕನಕಪುರದ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ನಾನು ಜಾಮೀನು ಪಡೆದುಕೊಂಡಿದ್ದೇನೆ.

**11)** ಅಪಘಾತವು ನನ್ನ ತಪ್ಪಿನಿಂದಲೇ ಆಗಿದೆ ಮತ್ತು ಈಗ ನನ್ನ ತಪ್ಪನ್ನು ಮುಚ್ಚಿ ಹಾಕುವ ಉದ್ದೇಶದಿಂದ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸುಳ್ಳು.

**ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಿಂದಃ**

ಸದರಿ ಎದುರುದಾರರು ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.